**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**

**ಕ್ರಿಮೀನಲ್ ಮೊಕದ್ದಮೆ ನಂ. 731/2020.**

**ಚಾಸಾ- 31**

**ಪ್ರಾಸಾ-06**

**ದಿನಾಂಕಃ 29-09-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

| | | |
|---|---|---|
| ಹೆಸರು | ಃ | ಮಂಜುಳಾ ತಃ ಸೋಮಪ್ಪ ರಾವೋಜಿ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಪಿ.ಎಸ್. ಐ, ಸಿ.ಎಸ್.ಪಿ, ಕಾರವಾರ |
| ವಾಸ | ಃ | ಕಾರವಾರ |

**<u>ಮುಖ್ಯ ವಿಚಾರಣೆ. ಎ. ಪಿ. ಪಿ. ವಕೀಲರಿಂದ</u>**

1. ನಾನು ದಿನಾಂಕಃ 02-08-2018 ರಿಂದ ದಿನಾಂಕಃ 05-03-2021 ರವರೆಗೆ ರಾಮನಗರ ಪೊಲೀಸ್ ಠಾಣೆಯಲ್ಲಿ ಆರಕ್ಷಕರ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ 12-04-2020 ರಂದು ರಾತ್ರಿ 10-30 ಗಂಟಗೆ ಠಾಣಾ ಪ್ರಭಾದಲ್ಲಿದ್ದಾಗ, ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಪಡೆದು,ಠಾಣಾ ಗುನ್ನಾ ನಂಃ 21/2020 ರಂತೆ ಪ್ರಕರಣವನ್ನು ದಾಖಲಿಸಿ, ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಅದೇ ಸಮಯದಲ್ಲಿ ಪಂಚನಾಮೆಯನ್ನು ಮತ್ತು ಜಪ್ತುಪಡಿಸಿಕೊಂಡ ಅಕ್ರಮ ಮದ್ಯವನ್ನು ಮತ್ತು ಒಂದು ವಾಹನವನ್ನು ಹಾಗೂ ಆರೋಪಿಯನ್ನು ಹಾಜರುಪಡಿಸಿರುತ್ತಾರೆ.
3. ಅಕ್ರಮ ಮದ್ಯದ ಬಗ್ಗೆ ಮಾಲು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ. ನಂತರ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ, ಆತನ ಸ್ವ -ಖುಷಿ ಹೇಳಿಕೆಯನ್ನು ಪಡೆದು, ಆತನನ್ನು ಸೂಕ್ತ ಬೆಂಗಾವಲಿನೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.
4. ನಂತರ ಚಾಸಾ-4 ರಿಂದ 29 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 10-06-2020 ರಂದು ರಾಸಾಯನಿಕ ಪರೀಕ್ಷೆಗೆ ತೆಗೆದಿಟ್ಟ ವಸ್ತುಗಳನ್ನು ನಮ್ಮ ಸಿಬ್ಬಂದಿಯ ಮೂಲಕ ಎಫ್.ಎಸ್.ಎಲ್ ಗೆ ಕಳುಹಿಸಿರುತ್ತೇವೆ. ನಂತರ ಉಳಿದ ಅಕ್ರಮ ಮದ್ಯವನ್ನು

ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ಕೋರಿ, ದಿಃ 12-04-2020 ರಂದು ಅಧಿಕೃತ ಅಧಿಕಾರಿಗಳು ಮತ್ತು ಡಿಸಿ ಆಫ್ ಎಕ್ಸೈಸ್ ಉತ್ತರ ಕನ್ನಡ, ಕಾರವಾರ ರವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ.

5. ಸದರಿ ಆದೇಶದ ಪ್ರತಿಯನ್ನು ದಿಃ 05-07-2020 ರಂದು ಪಡೆದುಕೊಂಡಿರುತ್ತೇನೆ ಮತ್ತು ದಿಃ 03-09-2020 ರಂದುಉಳಿದ ಮದ್ಯವನ್ನು ಹಸ್ತಾಂತರಿಸಿರುತ್ತೇನೆ. ದಿಃ 26-08-2020 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ತದನಂತರ ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದ ಕಾರಣ, ಆತನ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

6. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಹಾಜರಾತಿ ವಿನಾಯತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಆರೋಪಿಯನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ. ಆರೋಪಿಯನ್ನು ಗುರುತಿಸಲಾಗಿದೆ ಎಂದು ಪರಿಗಣಿಸಲಾಯಿತು.

7. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ 750 ಎಂ.ಎಲ್ ನ 13 ಬಾಟಲಿಗಳು ಹಾಗೂ 180 ಎಂ.ಎಲ್ ನ 2 ಬಾಟಲಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿರುತ್ತದೆ.

8. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 (ಬಿ) ಎಂದು ಗುರುತಿಸಲಾಯಿತು.

9. ಸಾಕ್ಷಿಯು ತಾನು ದಾಖಲಿಸಿದ ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 3(ಎ) ಎಂದು ಗುರುತಿಸಲಾಯಿತು.

10. ಸಾಕ್ಷಿಯು ದಿಃ 17-06-2020 ರ ಆದೇಶದ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 4(ಎ) ಎಂದು ಗುರುತಿಸಲಾಯಿತು.

11. ಸಾಕ್ಷಿಯು ದಿಃ 03-09-2020 ರ ಪೊಲೀಸ್ ಉಪನಿರೀಕ್ಷಕರಿಗೆ ನೀಡಿದ ಸ್ವಿಕೃತಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 5(ಎ) ಎಂದು ಗುರುತಿಸಲಾಯಿತು.

12. ಸಾಕ್ಷಿಯು ಎಫ್.ಎಸ್.ಎಲ್ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 6(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಎಸ್.ಜೆ ವಕೀಲರಿಂದ</u>**

13. ನಾನು ತನಿಖಾ ಸಮಯದಲ್ಲಿ ಘಟನಾ ಸ್ಥಳಕ್ಕೆ ಹೋಗಿದ್ದೆ. ಅಲ್ಲಿ ನಾನು ಕೇವಲ ಸ್ಥಳವನ್ನು ನೋಡಿ ಬಂದಿರುತ್ತೇನೆ, ಯಾವುದೇ ವ್ಯಕ್ತಿಗಳ ವಿಚಾರಣೆಯನ್ನು ಮಾಡಿರುವುದಿಲ್ಲ. ಆರೋಪಿಯ ಅನಮೋಡ್ ಚೆಕ್ ಪೋಸ್ಟ್ ಮುಂದೆಯೇ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಅಂದಾಜು 200 ಮೀಟರ್ ದೂರದಲ್ಲಿರುತ್ತದೆ ಎಂದು ನುಡಿಯುತ್ತಾರೆ.

14. ಅದೇ ರೀತಿ ಅನಮೋಡ ಚೆಕ್ ಪೋಸ್ಟ್ ನಂತರ ಕರ್ನಾಟಕ ರಾಜ್ಯದ ಹದ್ದಿನಲ್ಲಿ ಆರ್.ಟಿ.ಓ ಕಚೇರಿ ಇದ್ದು, ಅಲ್ಲಿಯೂ ಸಹ ಅನಮೋಡ ಪೊಲೀಸರು ಪರಿಶೀಲನೆ ಇರುತ್ತಾರೆ ಎಂದರೆ ಸರಿ. ಆದರೆ, ಕೊವಿಡ್ ಇದ್ದ ಕಾರಣ, ಪೊಲೀಸರು ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ಆರೋಪಿಯ ಮನೆಯಿಂದ ಜಪ್ತುಪಡಿಸಿದ್ದೇವೆ ಎನ್ನಲಾದ ವಾಹನದ ಮಾಲೀಕರು ಯಾರು ಎಂದು ತನಿಖೆ ಮಾಡಿಲ್ಲ.

16. ಘಟನೆ ನಡೆದಿದೆ ಎನ್ನಲಾದ ದಿನ ಮತ್ತು ಸಮಯದಲ್ಲಿ ದೇಶಾದ್ಯಂತ ಲಾಕ್ ಡೌನ ಇತ್ತು ಎಂದರೆ ಸರಿ, ಆದ್ದರಿಂದ ಅನಮೋಡ ಚೆಕ್ ಪೋಸ್ಟ್ ನಲ್ಲಿ ಪರಿಶೀಲನೆಗಾಗಿ ರೆವಿನ್ಯೂ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಇರುತ್ತಿದ್ದರು ಎಂದರೆ ಸರಿ.

17. ನಾವು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾವು ಯಾವುದೇ ಘಟನಾ ಸ್ಥಳಕ್ಕೆ ಹೋಗಿಲ್ಲ, ತನಿಖೆಯನ್ನು ಸರಿಯಾಗಿ ಮಾಡಿಲ್ಲ, ಆರೋಪಿಯ ಮನೆಯಿಂದ ಅಕ್ರಮ ಮದ್ಯವನ್ನು ಮತ್ತು ವಾಹನವನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ.

18. ಆರೋಪಿಗೂ ಈ ಪ್ರಕರಣಕ್ಕೂ ಮತ್ತು ಅಕ್ರಮ ಮದ್ಯ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಅಧಿಕಾರಿಗಳ ಕೋರಿಕೆಯ ಮೇರೆಗೆ ನಮ್ಮ ಠಾಣೆಯ ಅಂಕಿ

ಅಂಶಗಳಿಗೋಸ್ಕರ ಆರೋಪಿಗೆ ಈ ಅಕ್ರಮ ಮದ್ಯಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಮುಂದೆ ಯಾವುದೇ ಸ್ವ-ಖುಷಿ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

19. ಎಪ್.ಎಸ್.ಎಲ್ ಕಚೇರಿಗೆ ಕಳುಹಿಸಿದ ಸಿಬ್ಬಂದಿಯಾದ ಮಧುಕರ ನಾಯಕರವರ ಹೇಳಿಕೆಯನ್ನು ಪಡೆದಿಲ್ಲ.

**ಮರು ವಿಚಾರಣೆಃ ಇಲ್ಲ**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.**
**ದಂಡಾಧಿಕಾರಿಗಳು,ದಾಂಡೇಲಿ.**